ಕರ್ನಾಟಕ ಸರ್ಕಾರ

# ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ

## Karnataka Panchayat Raj Commissionerate

**ಸಂಖ್ಯೆ:**ಗ್ರಾಅಪ: ಪಂ.ರಾಜ್.2023 ದಿನಾಂಕ: 11-10-2023

ಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೆ,

**ವಿಷಯ:** 2023-24 ನೇ ಸಾಲಿನ ಸಾಮಾಜಿಕ ಪರಿಶೋಧನಾ ಸಂದರ್ಭದಲ್ಲಿ ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮಗಳನ್ನು ಏರ್ಪಡಿಸುವ ಕುರಿತು.

**ಉಲ್ಲೇಖ:**
1. ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:ಗ್ರಾಅಪ: 80:ಸಾಪನಿ (ಉಖಾಯೋ): 2023-24 ದಿನಾಂಕ: 20-07-2023.
2. ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ಪತ್ರ ದಿನಾಂಕ: 26-09-2023 ಮತ್ತು 27-09-2023.

ಮೇಲಿನ ವಿಷಯಕ್ಕೆ ಸಂಬಂಧಿಸಿಂತೆ, ಮಹಾತ್ಮ ಗಾಂಧಿ ನರೇಗಾ ಅಧಿನಿಯಮ-2005 ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಯೋಜನೆಗಳಡಿ ಪ್ರತಿ ವರ್ಷ ಅನುಷ್ಠಾನಗೊಳಸಲಾಗುವ ಕಾಮಗಾರಿಗಳನ್ನು ಸಾಮಾಜಿಕ ಪರಿಶೋಧನೆಗೆ ಒಳಪಡಿಸುವುದು ಕಡ್ಡಾಯವಾಗಿರುತ್ತದೆ. 2023-24ನೇ ಸಾಲಿನ ಸಾಮಾಜಿಕ ಪರಿಶೋಧನಾ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ವತಿಯಿಂದ ಉಲ್ಲೇಖ (1) & (2)ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿರುತ್ತದೆ. ಮಾರ್ಗಸೂಚಿಯಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿನಾಂಕ: 16.10.2023 ರಿಂದ ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ ಪ್ರಾರಂಭಿಸಲಾಗುತ್ತಿದೆ. ಈ ಸಂಬಂಧ ವೇಳಾಪಟ್ಟಿಯನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಯವರಿಂದ ಅನುಮೋದನೆ ಪಡೆದು ಪ್ರಕಟಿಸಲಾಗಿದೆ. ಸಾಮಾಜಿಕ ಪರಿಶೋಧನಾ ಮಾರ್ಗಸೂಚಿಯನ್ವಯ ಸಾಮಾಜಿಕ ಪರಿಶೋಧನೆ ನಡೆಸುವ ಬಗ್ಗೆ ಜನರಿಗೆ ಮಾಹಿತಿಯನ್ನು ನೀಡುವುದು ಮತ್ತು ಗ್ರಾಮ ಸಭೆಗಳಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅದನ್ನು ಎಲ್ಲರೂ ಭಾಗವಹಿಸುವ ಸಂಸ್ಥೆಯನ್ನಾಗಿ ಮಾಡುವುದು ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ **ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಸಾಮಾಜಿಕ ಪರಿಶೋಧನೆ ಬಗ್ಗೆ ಈ ಕೆಳಕಂಡ ಚಟುವಟಿಕೆಗಳ ಮೂಲಕ ಗ್ರಾಮ ಪಂಚಾಯಿತಿ ವತಿಯಿಂದ ವ್ಯಾಪಕ ಪ್ರಚಾರ ನೀಡಲು ತಿಳಸಿದೆ.**

| | |
|---|---|
| ಡಂಗೂರ ಸಾರುವುದು | ಸಾಮಾಜಿಕ ಪರಿಶೋಧನೆ ಪ್ರಾರಂಭಕ್ಕೆ ಮುಂಚಿನ 1 ವಾರದಲ್ಲಿ 3 ಬಾರಿ ಹಾಗೂ ಗ್ರಾಮ ಸಭೆ ಪೂರ್ವದಲ್ಲಿ ಒಂದು ಬಾರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರತಿ ಗ್ರಾಮದಲ್ಲಿ. (ಅನುಬಂಧ-1 ಲಗತ್ತಿಸಿದೆ) |
| ಬಟ್ಟೆ ಬ್ಯಾನರ್‌ಗಳನ್ನು ಅಳವಡಿಸುವುದು | ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಗ್ರಾಮದ ಜನಸಂದಣಿ ಹೆಚ್ಚು ಸೇರುವ ಸಾರ್ವಜನಿಕ ಸ್ಥಳದಲ್ಲಿ. (ಅನುಬಂಧ-2 ಲಗತ್ತಿಸಿದೆ) |
| ಕಲಾ ತಂಡಗಳ ಪ್ರದರ್ಶನ | ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿ ಹೆಚ್ಚು ವೆಚ್ಚ ಭರಿಸಿದ ಪ್ರತಿ ತಾಲ್ಲೂಕಿನ ಮೊದಲ 10 ಗ್ರಾಮ ಪಂಚಾಯಿತಿಗಳಲ್ಲಿ. (ಅನುಬಂಧ-3 ಲಗತ್ತಿಸಿದೆ) |

2ನೇ ಪುಟಕ್ಕೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ಹಳೆ ಕಟ್ಟಡ, ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಗಾಂಧಿನಗರ, ಬೆಂಗಳೂರು-560009.
Bengaluru Rural Old Zilla Panchayat Building, Kalidasa Marga, Gandhinagara, Bengaluru - 560 009.
Tel: 080-22010401 / 22282201 e-mail: prcrdprkar @gmail.com

Scanned with CamScanner

| | |
|---|---|
| ಪೂರ್ವಭಾವಿ ಸಭೆ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿ/ಸಿಬ್ಬಂದಿ | ಸಾಮಾಜಿಕ ಪರಿಶೋಧನೆಯ ಮೊದಲನೇ ದಿನ ಗ್ರಾಮ ಪಂಚಾಯತಿಯಲ್ಲಿ ನಡೆಯುವ ಪೂರ್ವಸಿದ್ಧತಾ ಸಭೆಗೆ ಗ್ರಾಮಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಸ್ವ-ಸಹಾಯ ಸಂಘದ ಪದಾಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಅಂಗನವಾಡಿ/ ಆಶಾ ಕಾರ್ಯಕರ್ತೆಯರು, ಯೋಜನೆಯ ಫಲಾನುಭವಿಗಳನ್ನು ಕಡ್ಡಾಯವಾಗಿ ಆಹ್ವಾನಿಸಿ ಮಾಹಿತಿ ನೀಡುವುದು. |

ಮೇಲಿನಂತೆ ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಏರ್ಪಡಿಸಲು ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ಸೂಚಿಸಿದೆ. ಈ ಕಾರ್ಯಕ್ರಮ ವ್ಯವಸ್ಥೆ ಮಾಡಲು ತಾಲ್ಲೂಕು ಮಹಾತ್ಮ ಗಾಂಧಿ ನರೇಗಾ ಐ.ಇ.ಸಿ ಸಂಯೋಜಕರ ನೆರವು ಪಡೆಯಬಹುದಾಗಿದೆ. ಕೈಗೊಳ್ಳುವ ಕ್ರಮದ ಬಗ್ಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲ್ವಿಚಾರಣೆ ಮಾಡಲು ಸೂಚಿಸಿದೆ.

ತಮ್ಮ ವಿಶ್ವಾಸಿ,

(ಪ್ರಿಯಾಂಕ ಮೇರಿ ಫ್ರಾನ್ಸಿಸ್ ಭಾ.ಆ.ಸೇ)
ಆಯುಕ್ತರು,
ಪಂಚಾಯತ್ ರಾಜ್ ಆಯುಕ್ತಾಲಯ.

**ಪ್ರತಿಗಳನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಮಾಹಿತಿಗಾಗಿ.
2. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಮಾಹಿತಿಗಾಗಿ.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಮಾಹಿತಿಗಾಗಿ.
4. ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ತಾಲ್ಲೂಕು ಪಂಚಾಯತ್‌ಗಳು ರವರ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
5. ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರುಗಳು ಸಾಮಾಜಿಕ ಪರಿಶೋಧನೆ ಎಲ್ಲಾ ಜಿಲ್ಲೆಗಳು ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
6. ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರುಗಳು ಸಾಮಾಜಿಕ ಪರಿಶೋಧನೆ ಎಲ್ಲಾ ತಾಲ್ಲೂಕುಗಳು ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

Scanned with CamScanner

# ಅನುಬಂಧ-1

1. (ಡಂಗೂರ ಸಾರುವವರು ನೀಡಬೇಕಾದ ಮಾಹಿತಿ)

_____ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ದಿ:________.ರಿಂದ ________..ವರೆಗೆ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ವತಿಯಿಂದ ಸರ್ಕಾರದ ಆದೇಶದಂತೆ 2022-23ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು ಆಯೋಗದ ಅನುದಾನ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನದ ವತಿಯಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ಸಾಮಾಜಿಕ ಪರಿಶೋಧನೆ ನಡೆಯುತ್ತದೆ.

ಸಾಮಾಜಿಕ ಪರಿಶೋಧನೆ ಅಂಗವಾಗಿ ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗದ ಅನುದಾನದ ವತಿಯಿಂದ ಕೈಗೊಳ್ಳಲಾಗಿರುವ ಪ್ರತಿಯೊಂದು ಕಾಮಗಾರಿಗಳ ದಾಖಲಾತಿ ಪರಿಶೀಲನೆಯನ್ನು ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ, ಎಲ್ಲಾ ಫಲಾನುಭವಿಗಳ ಮನೆ ಭೇಟಿ ಹಾಗೂ ಪ್ರತೀ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಲಾಗುವುದು, ಈ ಎಲ್ಲಾ ಚಟುವಟಿಕೆಗಳಲ್ಲಿ ಗ್ರಾಮದ ಎಲ್ಲಾ ಜನರು ಭಾಗವಹಿಸಿ ತಮ್ಮ ಅಭಿಪ್ರಾಯ ಮತ್ತು ಏನಾದರೂ ಸಮಸ್ಯೆ/ದೂರುಗಳಿದ್ದರೆ ತಿಳಿಸುವಂತೆ ಕೋರಲಾಗಿದೆ.

ಸಾಮಾಜಿಕ ಪರಿಶೋಧನಾ ಗ್ರಾಮ ಸಭೆ ------ದಿನಾಂಕದಲ್ಲಿ ನಡೆಯುತ್ತದೆ. ಗ್ರಾಮ ಸಭೆಯಲ್ಲಿ ಸಾಮಾಜಿಕ ಪರಿಶೋಧನಾ ವರದಿಗಳನ್ನು ಮಂಡಿಸಲಾಗುತ್ತದೆ. ತಾವುಗಳು (ಸಾರ್ವಜನಿಕರು) ಅದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದು ಮತ್ತು ದೂರುಗಳಿದ್ದರೆ ದಾಖಲಿಸುವಂತೆ ಕೋರಲಾಗಿದೆ.

Scanned with CamScanner

## ಅನುಬಂಧ-2

2. (ಬಟ್ಟೆ ಬ್ಯಾನರ್‌ಗಳನ್ನು ಅಳವಡಿಸುವುದು)

**ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಬೆಂಗಳೂರು**

**(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**

**ನಮ್ಮ ಹಣ, ನಮ್ಮ ಹಕ್ಕು, ನಮ್ಮ ಹೊಣೆಗಾರಿಕೆ**

---- **ಗ್ರಾಮ ಪಂಚಾಯತ್** ----- **ತಾಲ್ಲೂಕು** --------**ಜಿಲ್ಲಾ ಪಂಚಾಯತ್**

**2023-24 ನೇ ಸಾಲಿನಲ್ಲಿ**____________. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು ಆಯೋಗದ ಅನುದಾನ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನದಡಿ ಅನುಷ್ಠಾನಗೊಳಸಲಾಗಿರುವ ಕಾಮಗಾರಿಗಳನ್ನು ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ವತಿಯಿಂದ ದಿ:_________.ರಿಂದ ________ವರೆಗೆ ಸಾಮಾಜಿಕ ಪರಿಶೋಧನೆ ನಡೆಸಲಾಗುತ್ತದೆ.

ಸಾಮಾಜಿಕ ಪರಿಶೋಧನೆಯಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳು:

1) 2022-23ನೇ ಅವಧಿಯಲ್ಲಿ ಅನುಷ್ಠಾನಗೊಂಡ ಪ್ರತಿ ಕಾಮಗಾರಿಯ ದಾಖಲಾತಿ ಪರಿಶೀಲನೆ (ಗ್ರಾಮ ಪಂಚಾಯತಿ ಕಛೇರಿಯಲ್ಲಿ)
2) ಪ್ರತಿ ಫಲಾನುಭವಿಗಳ ಮನೆಯ ಭೇಟಿ
3) ಪ್ರತಿಯೊಂದು ಕಾಮಗಾರಿಗಳ ಸ್ಥಳ ಪರಿಶೀಲನೆ
4) ಸಾಮಾಜಿಕ ಪರಿಶೋಧನೆಯ ವರದಿ ಮಂಡನೆ _____ದಿನಾಂಕದ ಗ್ರಾಮ ಸಭೆಯಲ್ಲಿ

ಮೇಲಿನ ಎಲ್ಲಾ ಚಟುವಟಿಕೆಗಳಲ್ಲಿ ಸಾರ್ವಜನಿಕರು, ಯೋಜನೆಯ ಫಲಾನುಭವಿಗಳು, ಚುನಾಯಿತ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ, ದೂರುಗಳು/ಸಮಸ್ಯೆಗಳಿದ್ದರೆ ದಾಖಲಿಸಿ ಸಾಮಾಜಿಕ ಪರಿಶೋಧನೆಯನ್ನು ಯಶಸ್ವಿಗೊಳಸಲು ಕೋರಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ್__-----

ಅಧ್ಯಕ್ಷರು
ಗ್ರಾಮ ಪಂಚಾಯತ್__-----

Scanned with CamScanner

# ಅನುಬಂಧ-3

(ಕಲಾ ತಂಡದವರು ನೀಡಬೇಕಾದ ಮಾಹಿತಿ)

ಕಲಾ ತಂಡದವರು ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು ಆಯೋಗದ ಅನುದಾನ ರಾಜ್ಯ ಹಣಕಾಸು ಆಯೋಗ ಮತ್ತು ಸಾಮಾಜಿಕ ಪರಿಶೋಧನೆ ನಡೆಸುವ ಇತರೆ ಯೋಜನೆಗಳ ಉದ್ದೇಶ, ವ್ಯಾಪ್ತಿ ಹಾಗೂ ಸಾಮಾಜಿಕ ಪರಿಶೋಧನೆಯ ಉದ್ದೇಶ, ವ್ಯಾಪ್ತಿ, ಗ್ರಾಮ ಸಭೆಯ ಮಹತ್ವ, ಸಾರ್ವಜನಿಕರ /ಫಲಾನುಭವಿಗಳ ಭಾಗವಹಿಸುವಿಕೆಯ ಮಹತ್ವವನ್ನು ಕಲಾತ್ಮಕವಾಗಿ ಪ್ರಚಾರ ಪಡಿಸುವುದು.

ಸಾಮಾಜಿಕ ಪರಿಶೋಧನೆ ಎಂದರೆ, ವಿವಿಧ ಸ್ತರದಲ್ಲಿ ಕಾರ್ಯಗತಗೊಳ್ಳುವ ಕೆಲಸದ ಪ್ರಮಾಣ ಹಾಗೂ ಗುಣಮಟ್ಟವನ್ನು ಪರಿಶೀಲಿಸುವ ಸಾರ್ವಜನಿಕ ಕಣ್ಗಾವಲನ್ನು ಒಳಗೊಂಡಿರುವ ಒಂದು ನಿರಂತರವಾಗಿ ಚಾಲ್ತಿಯಲ್ಲಿರುವ ಪ್ರಕ್ರಿಯೆಯಾಗಿದೆ.

**ಉದ್ದೇಶಗಳು:**

- ಕಾರ್ಯಕ್ರಮದ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಉತ್ತೇಜಿಸುವುದು
- ಸಾಮಾಜಿಕ ಪರಿಶೋಧನೆ ನಡೆಸುವ ಸಂದರ್ಭದಲ್ಲಿ ಜನರಿಗೆ ಕಾನೂನಿನ ಅಡಿಯಲ್ಲಿ ಇರುವ ಅವರ ಹಕ್ಕುಗಳು ಮತ್ತು ಅರ್ಹತೆಗಳ ಬಗ್ಗೆ ಮಾಹಿತಿ ಮತ್ತು ಶಿಕ್ಷಣವನ್ನು ನೀಡುವುದು.
- ಜನರು ತಮ್ಮ ಅಗತ್ಯತೆಗಳು ಮತ್ತು ಕುಂದು ಕೊರತೆಗಳನ್ನು ವ್ಯಕ್ತಪಡಿಸಲು ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಯು ಸಾಮೂಹಿಕ ವೇದಿಕೆಯನ್ನು ಕಲ್ಪಿಸುವುದು.
- ಅನುಷ್ಠಾನದ ಎಲ್ಲಾ ಹಂತಗಳಲ್ಲಿ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.
- ಗ್ರಾಮಸಭೆಯಲ್ಲಿ ಜನರ ಭಾಗವಹಿಸುವಿಕೆಯನ್ನು ಬಲಪಡಿಸಿ, ಅದನ್ನು ಒಂದು ಸರ್ವರನ್ನೂ ಒಳಗೊಳ್ಳುವ ಮತ್ತು ಭಾಗವಹಿಸುವ ಸಂಸ್ಥೆಯನ್ನಾಗಿ ಮಾಡಿ ಮತ್ತು ಅದನ್ನು ಸಕಾರಾತ್ಮಕ ಸಾಮೂಹಿಕ ಕ್ರಮಕ್ಕೆ ವೇದಿಕೆಯನ್ನಾಗಿ ಮಾಡುವುದು.
- ಸಾಮಾಜಿಕ ಪರಿಶೋಧನೆಯಲ್ಲಿ ಭಾಗವಹಿಸುವ ಸ್ಥಳೀಯ ಪಾಲುದಾರರ ಸಾಮರ್ಥ್ಯ ಹೆಚ್ಚಿಸುವುದು. (ಉಲ್ಲೇಖ-Social Auditing Standards)

ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ:-

ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ ಆರು ದಿನಗಳಲ್ಲಿ ನಡೆಯಲಿದೆ.

- ಮೊದಲನೇ ದಿನ:- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಯೋಜನೆಯ ಫಲಾನುಭವಿಗಳು, ಚುನಾಯಿತ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟದ ಸದಸ್ಯರುಗಳ ಜೊತೆ ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ ಕುರಿತು ಪೂರ್ವಭಾವಿ ಸಭೆ, IEC ಚಟುವಟಿಕೆ (ಶಾಲಾ ಮಕ್ಕಳಿಂದ ಜಾತ/ಕಲಾ ತಂಡಗಳಿಂದ ಬೀದಿ ನಾಟಕ ಇತ್ಯಾದಿ) ಮತ್ತು ಸಾಮಾಜಿಕ ಪರಿಶೋಧನಾ ಅವದಿಯಲ್ಲಿ ಅನುಷ್ಠಾನಗೊಂಡ ಎಲ್ಲಾ ಕಾಮಗಾರಿಗಳ ದಾಖಲಾತಿಗಳನ್ನು ಪಡೆಯುವುದು.

Scanned with CamScanner

- ➢ ಎರಡನೇ ದಿನ:-ಸಾಮಾಜಿಕ ಪರಿಶೋಧನೆಯ ಸಂದರ್ಭದಲ್ಲಿ ಪಡೆದ ಎಲ್ಲಾ ದಾಖಲಾತಿಗಳ ಪರಿಶೀಲನೆ ಮತ್ತು ಯೋಜನೆಯ ಎಲ್ಲಾ ಫಲಾನುಭವಿಗಳ ಮನೆ ಭೇಟಿ.
- ➢ ಮೂರನೇ ದಿನ:- ಸಾಮಾಜಿಕ ಪರಿಶೋಧನಾ ಅವದಿಯಲ್ಲಿ ಅನುಷ್ಠಾನಗೊಂಡ ಎಲ್ಲಾ ಕಾಮಗಾರಿಗಳ ಸ್ಥಳ ಪರಿಶೀಲನೆ ಮತ್ತು ಎಲ್ಲಾ ಮನೆಗಳ ಭೇಟಿ.
- ➢ ನಾಲ್ಕನೇ ದಿನ:- ಕಾಮಗಾರಿಗಳ ಸ್ಥಳ ಪರಿಶೀಲನೆ, ಮನೆ ಭೇಟಿ ಮುಂದುವರೆಯುವುದು ಮತ್ತು ಕೇಂದ್ರೀಕೃತ ಗುಂಪು ಚರ್ಚೆ(FGD).
- ➢ ಐದನೇ ದಿನ:- ಬಾಕಿ ಉಳಿದ ಪ್ರಕ್ರಿಯೆಗಳನ್ನು (ಕಾಮಗಾರಿಗಳ ಸ್ಥಳ ಪರಿಶೀಲನೆ, ಮನೆ ಭೇಟಿ ಪೂರ್ಣಗೊಳಿಸುವುದು ಮತ್ತು ಕರಡು ವರದಿ ತಯಾರಿಸುವುದು.
- ➢ ಆರನೇ ದಿನ:- ಸಾಮಾಜಿಕ ಪರಿಶೋಧನಾ ವಿಶೇಷ ಗ್ರಾಮ ಸಭೆಯಲ್ಲಿ, ಸಾರ್ವಜನಿಕರು ಹಾಗೂ ಅನುಷ್ಠಾನಾಧಿಕಾರಿಗಳ ಸಮ್ಮುಖದಲ್ಲಿ ಸಾಮಾಜಿಕ ಪರಿಶೋಧನೆಯ ವರದಿ ಮಂಡನೆ.

ಸಾಮಾಜಿಕ ಪರಿಶೋಧನೆ ಕೈಗೊಳ್ಳುವ ಯೋಜನೆಗಳು.

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
2. 14 ಮತ್ತು 15ನೇ ಹಣಕಾಸು ಆಯೋಗದ ಅನುದಾನ (ಗ್ರಾ.ಪಂ, ತಾ.ಪಂ ಮತ್ತು ಜಿ.ಪಂ.)
3. ರಾಜ್ಯ ಹಣಕಾಸು ಆಯೋಗದ ಅನುದಾನ (ತಾ.ಪಂ ಮತ್ತು ಜಿ.ಪಂ)
4. ಸಮಗ್ರ ಶಿಕ್ಷಣ ಅಭಿಯಾನ.

ಸಾಮಾಜಿಕ ಪರಿಶೋಧನೆಯ ಫಲಿತಾಂಶ.

- ಅಭಿವೃದ್ಧಿ ಯೋಜನೆಗಳಾದ ಮಹಾತ್ಮ ಗಾಂಧಿ ನರೇಗಾ ಯೋಜನೆ, 14 ಮತ್ತು 15ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗದ ಅನುದಾನ ಮುಂತಾದ ಯೋಜನೆಗಳ ಕುರಿತು ಜನರಿಗೆ ಸಂಪೂರ್ಣ ಮಾಹಿತಿ ದೊರೆಯುತ್ತದೆ.
- ಯೋಜನೆಗಳು ಪ್ರತಿಯೊಂದು ಗ್ರಾಮದಲ್ಲಿ ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿರುವ ಕುರಿತು ಅಥವಾ ಯೋಜನೆಯು ಸಮರ್ಪಕವಾಗಿ ಜನರಿಗೆ ಉಪಯೋಗವಾಗುವ ರೀತಿಯಲ್ಲಿ ನಡೆದಿಲ್ಲವೆಂಬ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಗ್ರಾಮ ಸಭೆಯಂತಹಾ ವೇದಿಕೆ ಜನರಿಗೆ ದೊರೆಯುತ್ತದೆ.
- ಸಾರ್ವಜನಿಕರು ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಯಲ್ಲಿ ಭಾಗವಹಿಸಲು (ದಾಖಲಾತಿ ಪರಿಶೀಲನೆ, ಮನೆಗಳ ಭೇಟಿ, ಕಾಮಗಾರಿಗಳ ಸ್ಥಳ ಪರಿಶೀಲನೆ, ಗ್ರಾಮ ಸಭೆ) ಅವಕಾಶವಿರುವುದರಿಂದ ಸಾಮಾಜಿಕ ಪರಿಶೋಧನಾ ತಂಡದೊಂದಿಗೆ ತಮ್ಮ ಸಮಸ್ಯೆಗಳನ್ನು ತಿಳಿಸಲು ಮತ್ತು ವರದಿಯಲ್ಲಿ ದಾಖಲಿಸಲು ಸಾಧ್ಯವಾಗುವುದು.
- ಜನರು ತಮ್ಮ ಹಕ್ಕುಗಳನ್ನು ತಿಳಿದುಕೊಂಡು ಯೋಜನೆಗಳ ಅನುಷ್ಠಾನದ ಹಂತದಲ್ಲಿ ಮತ್ತು ಗ್ರಾಮ ಸಭೆಗಳಲ್ಲಿ ತಮ್ಮ ಸಮಸ್ಯೆಗಳ (ಕೆಲಸ ದೊರಕದಿರುವುದು, ಕೂಲಿ ವಿಳಂಬ, ಉದ್ಯೋಗ ಚೀಟಿ ನೀಡದಿರುವುದು, ಕೆಲಸದ ಸ್ಥಳದಲ್ಲಿನ ಸೌಲಭ್ಯಗಳಾದ ಶುದ್ಧ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಪ್ರಥಮಾ ಚಿಕಿತ್ಸಾ ಪೆಟ್ಟಿಗೆ, ಶಿಶು ಪಾಲನಾ ವ್ಯವಸ್ಥೆ ಇಲ್ಲದಿರುವುದು) ಕುರಿತು ಪ್ರಶ್ನಿಸಲು ಅವಕಾಶವಿರುವುದರಿಂದ ಯೋಜನೆಗಳು ಮುಂದೆ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳ್ಳಲು ಸಾಧ್ಯವಾಗುವುದು.

Scanned with CamScanner

- ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಅವಕಾಶವಿರದ ಚಟುವಟಿಕೆಗಳಾದ ಯಂತ್ರ ಬಳಕೆ, ಗುತ್ತಿಗೆದಾರರಿಂದ ಕಾಮಗಾರಿಗಳನ್ನು ಕೈಗೊಳ್ಳುವುದು, ಕಾಮಗಾರಿಗಳನ್ನು ಮಾಡದೆ ಹಣ ಪಾವತಿಸಿರುವುದು ಇತ್ಯಾದಿ ಅಂಶಗಳನ್ನು ಸಾರ್ವಜನಿಕರು ಸಾಮಾಜಿಕ ಪರಿಶೋಧನಾ ತಂಡಕ್ಕೆ ತಿಳಸುವುದರಿಂದ ಸಾಕ್ಷಿ ಸಂಗ್ರಹಕ್ಕೆ ಸಹಾಯವಾಗುವುದು. ಇದರಿಂದ ಹಣಕಾಸಿನ ದುರುಪಯೋಗದಂತಹಾ ಅಂಶಗಳನ್ನು ತಡೆಗಟ್ಟಲು ಸಾಧ್ಯವಾಗುವುದು.
- ಗ್ರಾಮ ಸಭೆಯಲ್ಲಿ, ಹಿಂದಿನ ಗ್ರಾಮಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಸಿಗುವುದರಿಂದ ಗ್ರಾಮ ಸಭೆಗಳ ಮೇಲೆ ಜನರಿಗೆ ವಿಶ್ವಾಸ ಹೆಚ್ಚುವುದು ಮತ್ತು ಜನರ ಭಾಗವಹಿಸುವಿಕೆ ಹೆಚ್ಚಾಗುವುದು.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ಪರಿಶೋಧನೆಯ ಉದ್ದೇಶ, ವ್ಯಾಪ್ತಿ ಗ್ರಾಮ ಸಭೆಯ ಮಹತ್ವ, ಸಾರ್ವಜನಿಕರ/ಫಲಾನುಭವಿಗಳ ಭಾಗವಹಿಸುವಿಕೆಯ ಮಹತ್ವವನ್ನು ಸಾರುವ ಪ್ರಹಸನ, ನಾಟಕ, ಹಾಡುಗಳ (ಲಾವಣಿ) ಮೂಲಕ ಜನರಿಗೆ ಮನಮುಟ್ಟುವಂತೆ ಕಲಾತ್ಮಕವಾಗಿ ಪ್ರಚಾರ ಪಡಿಸುವುದು.

Scanned with CamScanner